ದಿನಾಂಕ : 23.08.2023 ರಂದು ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.

<u>ಪಾಟೀ ಸವಾಲು :3 ನೇ ಎದುರುದಾರರ ಪರ **ಶ್ರೀ** ಟಿ ಎಸ್ ಆರ್ **ವಕೀಲರಿಂದ,**</u>

ನಾನು ತರಕಾರಿ ವ್ಯಾಪಾರ ಮಾಡುತ್ತಿದ್ದು ದಿನಕ್ಕೆ 600/- ದುಡಿಮೆ ಬರುತ್ತದೆ ಎಂದು ನುಡಿಯುತ್ತಾರೆ. ನನಗೆ ಸೇರಿದ ಜಮೀನು ಇದ್ದು, ನ್ಯಾಯಾಲಯದಲ್ಲಿ ದಾಖಲೆ ಹಾಜರು ಪಡಿಸಿದ್ದೇನೆ. ಸದರಿ ಜಮೀನನ್ನು ಸಾಗುವಳಿ ಮಾಡಲು ಬೇರೆಯವರಿಗೆ ಕೊಟ್ಟಿರುತ್ತೇನೆ. ನನ್ನ ಸ್ವಂತ ಊರು ಕೊನಾಪುರಾ ಮೊಳಕಾಲ್ಮೂರು ತಾಲೂಕು, ಚಿತ್ರದುರ್ಗಾ ಜಿಲ್ಲೆಯಾಗಿರುತ್ತದೆ ನಾನು ಈಗ ಬಳ್ಳಾರಿಯ ಹಲಕುಂದಿ ಗ್ರಾಮದಲ್ಲಿದ್ದೇನೆ. ಹಲಕುಂದಿ ಗ್ರಾಮದಲ್ಲಿ ನಾನು ತರಕಾರಿ ವ್ಯಾಪಾರ ಮಾಡಿಕೊಂಡು ಜೀವನ ಸಾಗಿಸುತ್ತಿದ್ದೇನೆ. ನನಗೆ ಬಿ.ಪಿ.ಎಲ್ ಕಾರ್ಡ್ ಇದೆ ಎಂದರೆ ಸರಿ. ಬಿ.ಪಿ ಎಲ್ ಕಾರ್ಡ್ ದಾರರಿಗೆ ವಿಮ್ಸ್ ಆಸ್ಪತ್ರೆಯಲ್ಲಿ ಉಚಿತವಾದ ಚಿಕಿತ್ಸೆ ನೀಡಲಾಗುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಓ ಪಿಡಿ ಯಲ್ಲಿ ನಾಲ್ಕು ದಿನಗಳವರೆಗೂ ಇದ್ದು ನಂತರ ಹೆಚ್ಚಿನ ಚಿಕಿತ್ಸೆಯನ್ನು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದೇನೆ. ಬೇರೆ ಬೇರೆ ಖಾಸಗಿ ಆಸ್ಪತ್ರೆಯಲ್ಲಿ ನಾನು ಚಿಕಿತ್ಸೆ ಪಡೆದುಕೊಂಡಿದ್ದೇನೆ. ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ ಎಂದು ತೋರಿಸಲು ನ್ಯಾಯಾಲಯದಲ್ಲಿ ದಾಖಲೆ ಹಾಜರು ಪಡಿಸಿರುವುದಿಲ್ಲ.

ನಾನು ಶಸ್ತ್ರ ಚಿಕಿತ್ಸೆಗೆ ಒಳಗೊಂಡಿರುವುದಿಲ್ಲ ಎಂದರೆ ಸರಿ. ನನ್ನ ಅಣ್ಣನ ಮಗ ಹಂಪಯ್ಯ ಆಟೋ ಚಲಾಯಿಸುತ್ತಾನೆ. ನಾನು ಆಟೊದಲ್ಲಿ ಹೋಗುತ್ತಿರುವಾಗ ಸದರಿ ಅಪಘಾತವಾಗಿದೆ ಎಂದರೆ ಸರಿ. ಸದರಿ ಅಪಘಾತವು ರಾಷ್ಟ್ರೀಯ ಹೆದ್ದಾರಿ ಎನ್ ಹೆಚ್ 150 ಬೊಮ್ಮಕ್ಕನ ಹಳ್ಳಿ ಹತ್ತಿರ ಆಗಿದೆ ಎಂದರೆ ಸರಿ. ಸದರಿ ಅಪಘಾತವು ಹಂಪಯ್ಯನ ತಪ್ಪಿನಿಂದ ಆಗಿದೆ ಎಂದರೆ

ಸರಿಯಲ್ಲ. ಲಾರಿ ಚಾಲಕ 1 ನೇ ಎದುರುದಾರರ ತಪ್ಪಿನಿಂದ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಅಪಘಾತವು ನಡು ರಸ್ತೆಯಲ್ಲಿ ಆಗಿದ ಎಂದರೆ ಸರಿ. ಚಿಕಿತ್ಸೆ ಕುರಿತು ನಾನು ಒಂದು ಲಕ್ಷ ರೂ. ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ವಿಮ್ಸ್ ಆಸ್ಪತ್ರೆಯಲ್ಲಿ ನಾನು 2000/- ರೂ ಮೊತ್ತವನ್ನು ಭರಿಸಿರುವುದನ್ನು ಹೊರತು ಪಡಿಸಿ ಬೇರೆ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ಸದರಿ ಅಪಘಾತದ ಕುರಿತು ದೂರನ್ನು ಯಾರು ದಾಖಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಈ ಅರ್ಜಿಯನ್ನು ಹೊರತು ಪಡಿಸಿ ನಾನು ಬೇರೆ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಸದರಿ ಅಪಘಾತದ ಕುರಿತು ಪೊಲಿಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೊ ಇಲ್ಲವೊ ನನಗೆ ಗೊತ್ತಿಲ್ಲ. ಸದರಿ ಅಪಘಾತವು ಹಂಪಯ್ಯನ ತಪ್ಪಿನಿಂದ ಆಗಿದ್ದು, ಪೊಲಿಸರ ಮೇಲೆ ಒತ್ತಡ ಹೇರಿ 1 ನೇ ಎದುರುದಾರರ ವಿರುದ್ಧ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ನಾನು ಮೊಬೈಲ್ ಬಳಕೆ ಮಾಡುತ್ತೇನೆ ಎಂದರೆ ಸರಿ. ನನಗೆ ಯಾವುದೇ ತೊಂದರೆ ಇರುವುದಿಲ್ಲ ಪರಿಹಾರ ಧನ ಪಡೆದುಕೊಳ್ಳಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸಂಪೂರ್ಣವಾಗಿ ಗುಣಮುಖವಾಗಿರುವ ಕಾರಣ ವಿಮ್ಸ್ ಆಸ್ಪತ್ರೆಯಿಂದ ನನಗೆ ಡಿಸ್ ಚಾರ್ಜ್ ಮಾಡಲಾಗಿದೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇರುವುದಿಲ್ಲ.**

*(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)*

ಓ ಹೇ ಕೇ ಸರಿ ಇದೆ

**2 ನೇ ಹೆ ಹಿ ಸಿವಿಲ್ ಜಡ್ಜ್, ಬಳ್ಳಾರಿ**